**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ**

ಸಿ.ಸಿ. ನಂ- 397/2020

Cw-10 Pw-6

| | |
|---|---|
| ಹೆಸರು | ಮಹಮ್ಮದಇಲಿಯಾಸ್ ತಂದೆ ಅಬ್ದುಲರಜಾಕ ಅಪರಾಧ |
| ವಯಸ್ಸು | 28 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಜಮಖಂಡಿ |

ದಿನಾಂಕಃ08-12-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ನನ್ನ ಅಣ್ಣನ ಹೆಸರು ಉಮರ ಪಾರುಕ ಆಗಿದ್ದು ದಿನಾಂಕ 22-11-2019 ರಂದು ಚಾಸಾ-8 ರವರು ಇಚಲಕರಂಜಿಗೆ ದಿನಕಾರ್ಯವನ್ನು ಮುಗಿಸಿಕೊಂಡು ಜಮಖಂಡಿಗೆ ಬಂದು ಬಸ್ಸ ನಿಲ್ದಾಣಕ್ಕೆ ಬಂದು ನನ್ನ ಅಣ್ಣನಿಗೆ ಫೋನ ಕರೆ ಮಾಡಿ ದ್ವಿಚಕ್ರ ವಾಹನದ ಮೇಲೆ ಬರಲು ಸೂಚಿಸಿದ ಮೇಲೆ ಆತನು ಜಮಖಂಡಿ ಮುದೋಳ ಬೈಪಾಸ ರಸ್ತೆಯ ಮೇಲೆ ಬರುವಾಗ ಲಕ್ಕನ ಕೆರೆ ಹತ್ತಿರ ಅಪಘಾತವಾಗಿರುತ್ತದೆ . ನಾನು ಆ ಸಮಯದಲ್ಲಿ ಮನೆಯಲ್ಲಿ ಇದ್ದಾಗ ಚಾಸಾ-6 ಇತನು ಮನೆಗೆ ಬಂದು ಅಪಘಾತದ ವಿಚಾರವನ್ನು ತಿಳಿಸಿದ ಮೇಲೆ ನಾನು , ನನ್ನ, ಚಾಸಾ-1 , ಚಾಸಾ-9 , ಚಾಸಾ-8 ರವರು ಕೂಡಿಕೊಂಡು ಅಪಘಾತ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ರಕ್ತ ಬಿದ್ದಿತ್ತು ಮತ್ತು ನನ್ನ ಅಣ್ಣನಿಗೆ ಜಮಖಂಡಿ ಕೆ ಎಲ್ ಇ ಆಸ್ಪತ್ರೆಗೆ ಹೋದ ಬಗ್ಗೆ ಚಾಸಾ-6 ಇತನು ತಿಳಿಸಿರುತ್ತಾನೆ . ಅಲ್ಲಿ ಹೋಗಿ ನೋಡಲಾಗಿ ನನ್ನ ಅಣ್ಣ ಮರಣ ಹೊಂದಿದ್ದ . ನಂತರ ನನ್ನ ಅಣ್ಣನ ಶವವನ್ನು ಜಮಖಂಡಿ ಸರ್ಕಾರಿ ಆಸ್ಪತ್ರೆಯಲ್ಲಿ ಶವಗಾರ ಕೋಣೆಯಲ್ಲಿ ಹಾಕಿರುತ್ತಾರೆ . ಆತನಿಗೆ ನೋಡಲಾಗಿ ಅತನ ತಲೆಯ ಹಿಂದುಗಡೆ ಬಾರಿ ಗಾಯವಾಗಿ ರಕ್ತ ಸೋರುತ್ತಿತ್ತು . ನಂತರ ಚಾಸಾ-6 ಇತನು ಅಪಘಾತದ ವಿಚಾರವನ್ನು ತಿಳಿಸಿರುತ್ತೇನೆ . ಅಪಘಾತವೂ ಕಾರ ವಾಹನದಿಂದ ಆಗಿರುತ್ತದೆ . ಸದರಿ ಕಾರ ವಾಹನದ ನಂಬರ ಗೊತ್ತಿಲ್ಲ ಮತ್ತು ಕಾರ ಚಾಲಕ ನ್ಯಾಯಾಲಯದ ಮುಂದೆ ಇರುವ ಆರೋಪಿತನೇ ಚಲಾಯಿಸುತ್ತಿದ್ದನು . ನನ್ನ ಅಣ್ಣನು ಎಚ್ ಎಫ್ ಡಿಲಕ್ಸ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಅದರ ನೋಂದಣಿ ಸಂಖ್ಯೆ ನನಗೆ ನೆನಪಿಲ್ಲ . ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ .

***ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು. ಮಾನ್ಯ ಸಸಅ ರವರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.***

**ಪಾಟೀ ಸವಾಲುಃ ಮಾನ್ಯ ಎಪಿಪಿ ವರಿಂದ–** ದಿನಾಂಕ 22-11-2019 ರಂದು ಚಾಸಾ-8 ಇತನು ಸ್ವಂತ ಕೆಲಸದ ಮೇಲೆ ಚೌಡಯ್ಯಾ ನಗರದ ಕ್ರಾಸದ ಹತ್ತಿರದಲ್ಲಿ ಇದ್ದಾಗ ಜಮಖಂಡಿ ಮುದೋಳ ಬೈ ಪಾಸ ರಸ್ತೆ ಹತ್ತಿರ ಅಂದರೆ ಲಕ್ಕನಕೆರೆ ಇದ್ದ ಕಡೆಯಿಂದ ಮುದೋಳ ರೋಡ ರಸ್ತೆಯ ಮೇಲೆ ಒಬ್ಬ ಕಾರ ನಂಬರ ಕೆ ಎ -48 ಎಂ 9463 ನೇದ್ದರ ಚಾಲಕ ಸಂತೋಷ ಕರ್ಲಟ್ಟಿ ಇತನು ತನ್ನ ಕಾರನ್ನು ಅತೀ ವೇಗ ಮತ್ತು ನಿಸ್ಕಾಜತದಿಂದ ಚಲಾಯಿಸಿಕೊಂಡು ಬಂದು ನನ್ನ ಅಣ್ಣನ ದ್ವಿಚಕ್ರ ವಾಹನ ಸಂಖ್ಯೆ ಕೆ ಎ- 48-ಕೆ -5965 ಕ್ಕೆ ಹಾಯಿಸಿದ್ದರಿಂದ ನನ್ನ ಅಣ್ಣನ ತಲೆಯ ಹಿಂಬದಿಗೆ ಬಾರಿ ಸ್ವರೂಪದ ಗಾಯಗಳು ಆಗಿ 108 ಅಂಬುಲೆನ್ಸದಲ್ಲಿ ಅತನನ್ನು ಹಾಕಿಕೊಂಡು ಜಮಖಂಡಿ ಕೆ ಎಲ್ ಇ ಆಸ್ಪತ್ರೆಗೆ ಬರುವಾಗಿ ಸಂಜೆ 05-00 ಗಂಟೆ ಆಗಿತ್ತು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿ ಪರ ವಕೀಲರನ್ನು ಕೂಗಿಸಲಾಯಿತು ಗೈರು ಹಾಜರ ಇದ್ದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ